ಅಧ್ಯಕ್ಷರು: ಈ ಪ್ರಶ್ನೆಗೆ ಉತ್ತರ ಕೊಡಿ. ಆರೋಗ್ಯ ಮಂತ್ರಿಗಳು ಈ ಪ್ರಶ್ನೆಗೆ ಒಂದು ವಾರದೊಳಗೆ ಉತ್ತರ ಕೊಡಬೇಕು.

ಶ್ರೀ ಆರ್ ಅಶೋಕ್: ಆಯಿತು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಮಾಹಿತಿಯನ್ನು ಒಂದು ದಿನದಲ್ಲಿ ಅವರು ತಂದು ಕೊಡಬಹುದಾಗಿತ್ತು. ಇವರು ಏಕೆ ಒಂದು ತಿಂಗಳೂ ಸಮಯ ಕೇಳಿರುವುದು?

ಅಧ್ಯಕ್ಷರು: ಒಂದು ವಾರದಲ್ಲಿ ಕೊಡಬೇಕು ಎಂದು ಹೇಳಿದ್ದೇನೆಲ್ಲ.

ಶ್ರೀ ವಾಟಾಳ್ ನಾಗರಾಜ್: ಒಂದು ವಾರ ಕೂಡ ಸರಿಯಲ್ಲ. ನೀವು ಏನು ಸಾರ್ ಇದು.

ಅಧ್ಯಕ್ಷರು: ಇರಲಿ.

ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು

50(384) ಶ್ರೀ ಮಲ್ಲಿಖಾರ್ಜುನ ಸಿದ್ರಾಮಪ್ಪ ಖೂಬಾ (ಬಸವ ಕಲ್ಯಾಣ)

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು? ಇವು ಎಲ್ಲೆಲ್ಲಿ ಇವೆ?

ಆ) ಈ ಆಸ್ಪತ್ರೆಗಳಿಗೆ ಮಂಜೂರಾಗಿರುವ ಎಲ್ ಎಂ ಓ ಹುದ್ದೆಗಳ ಸಂಖ್ಯೆ ಎಷ್ಟು? (ಆಸ್ಪತ್ರೆವಾರು ವಿವರಗಳನ್ನು ಒದಗಿಸುವುದು)

ಇ) ಈ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ? ಎಷ್ಟು ಹುದ್ದೆಗಳು ಎಷ್ಟು ಅವಧಿಯಿಂದ ಖಾಲಿ ಇವೆ?

ಈ) ಖಾಲಿ ಇರುವ ಹುದ್ದರಗಳನ್ನು ಭರ್ತಿ ಮಾಡಲು ಸರಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್ ಅಶೋಕ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಬಸವಕಲ್ಯಾಣ ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಬಸವಕಲ್ಯಾಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ರಾಜೇಶ್ವರದಲ್ಲಿ ಒಂದು ಸಮುದಾಯ ಆರೋಗ್ಯ ಕೇಂದ್ರ ಇದ್ದು, 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರುತ್ತದೆ. 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಈ ಕೆಳಕಂಡ ಸ್ಥಳಗಳಲ್ಲಿವೆ.

1. ಸಾರ್ವಜನಿಕ ಆಸ್ಪತ್ರೆ ಬಸವಕಲ್ಯಾಣ
2. ಮಂಠಾಳ
3. ಕೊಹಿನೂರು
4. ಮುಚಳಂಬ
5. ರಾಜೇಶ್ವರ
6. ಮುಡುಬಿ
7. ಬೇಲೂರಾ.
8. ಕಿಟ್ಟಾ
9. ಧನ್ನೂರ.ಕೆ
10. ಘೋಟಾಳ
11. ಹಾರಕೂಡ.

ಆ) ಈ ಕೆಳಕಂಡ ಆಸ್ಪತ್ರೆಗಳಿಗೆ ತಲಾ ಒಂದರಂತೆ ಒಟ್ಟು 3 ಮಹಿಳಾ ವೈದ್ಯಾಧಿಕಾರಿ ಹುದ್ದೆಗಳು ಮಂಜೂರಾಗಿರುತ್ತದೆ.

1. ಸಾರ್ವಜನಿಕ ಆಸ್ಪತ್ರೆ ಬಸವಕಲ್ಯಾಣ
2. ಸಮುದಾಯ ಆರೋಗ್ಯ ಕೇಂದ್ರ ರಾಜೇಶ್ವರ

3. ಪ್ರಾಥಮಿಕ ಆರೋಗ್ಯ ಕೇಂದ್ರ ಮಂಠಾಳ

ಇ) ಈ ಪೈಕಿ ಸಮುದಾಯ ಆರೋಗ್ಯ ಕೇಮದ್ರ ರಾಜೇಶ್ವರದಲ್ಲಿ ಒಬ್ಬರು ಕರ್ತವ್ಯ ನಿರ್ವಹಿಸುತ್ತಿದ್ದು ಮಂಠಾಳಾದಲ್ಲಿ ಮಹಿಳಾ ವೈದ್ಯರ ಎದುರು ಹುದ್ದೆಯಲ್ಲಿ ಪುರುಷ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಾರ್ವಜನಿಕ ಆಸ್ಪತ್ರೆ ಬಸವಕಲ್ಯಾಣದಲ್ಲಿ ದಿನಾಂಕ 28–07–06 ರಿಂದ ಮಹಿಳಾ ವೈದ್ಯರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತಾರೆ.

ಈ) ಇಲಾಖೆಯಲ್ಲಿ ಮಹಿಳಾ ವೈದ್ಯರ ಕೊರತೆ ಇರುವುದಿರಿಂದ ಕೆಲವು ಕಡೆ ಪುರುಷ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು ನೇಮಕಾತಿ ಆದೇಶ ಹೊರಡಿಸುವಾಗ ಆದ್ಯತೆ ಮೇರೆಗೆ ಮಹಿಳಾ ವೈಧ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಮಲ್ಲಿಖಾರ್ಜುನ ಸಿದ್ರಾಮಪ್ಪ ಖೂಬಾ: ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಈಗಾಗಲೇ ನಮ್ಮ ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಮಂಠಾಳ, ರಾಜೇಶ್ವರ ಮತ್ತು ಬಸವಕಲ್ಯಾಣದಲ್ಲಿ LMO ಹುದ್ದೆಗಳು ಸುಮಾರು ಎರಡು ವರ್ಷದಿಂದ ಖಾಲಿಯಿದ್ದರೂ ಕೂಡ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಸರಿಯಾಗಿ ಹೇಳಬೇಕು. ಏಕೆಂದರೆ ನಮ್ಮಲ್ಲಿ 3,00,000 ಜನಸಂಖ್ಯೆ ಇದ್ದು ಸುಮಾರು ಎರಡು ವರ್ಷವಾದರೂ ಕೂಡ LMO doctors ಇಲ್ಲ. ಅಲ್ಲಿಗೆ ಯಾವತ್ತು ಆ ವೈದ್ಯರನ್ನು ಹಾಕುತ್ತೀರಿ ಎಂದು ದಿನಾಂಕವನ್ನು ಕೊಡಬೇಕು.

ಶ್ರೀ ಆರ್ ಅಶೋಕ್: ಮಾನ್ಯ ಅಧ್ಯಕ್ಷರೆ, ಬಸವ ಕಲ್ಯಾಣದಲ್ಲಿ ಮಹಿಳಾ ವೈದ್ಯರ ಕೊರತೆ ಇದೆಯೆಂದು ಕೇಳಿದ್ದಾರೆ. ಸಾರ್ವಜನಿಕ ಆಸ್ಪತ್ರೆಯಲ್ಲಿ ಒಂದು ಕಡೆ ಮಾತ್ರ ಮಹಿಳಾ ವೈದ್ಯರು ಇದ್ದಾರೆ. ಇನ್ನು

ಎರಡು ಕಡೆ ಮಹಿಳಾ ವೈದ್ಯರು ಇಲ್ಲ. ಒಂದು ಕಡೆ ಬಹಳ ದಿನಗಳಿಂದ ಒಬ್ಬರು ಗೈರು ಹಾಜರಾಗಿದ್ದಾರೆ, ಅವರ ಮೇಲೆ ಶಿಸ್ತು ಕ್ರಮ ತೆಗೆದು ಕೊಳ್ಳಬೇಕೆಂದು ನಾನು ಆದೇಶ ಮಾಡಿದ್ದೇನೆ. ಈಗಾಗಲೇ ನಾನು ಮೊದಲನೆ ಪ್ರಶ್ನೆಗೆ ಉತ್ತರ ಹೇಳಿದಂತೆ ಮಹಿಳಾ ವೈದ್ಯರ ನೇಮಕಾರಿಗೆ ಸಂಬಂದಪಟ್ಟಂತೆ 250 ಜನ ವೈದ್ರನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ 33% ಮೇಲ್ಪಟ್ಟು ಮಹಿಳಾ ವೈದ್ಯರು ಬಂದಿದ್ದಾರೆ. ಆ ಸಂದರ್ಭದಲ್ಲಿ ಅಲ್ಲಿಗೆ ಅವರನ್ನು ನೇಮಕ ಮಾಡುವಂಥಹ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುತ್ತೇನೆ. ಗುತ್ತಿಗೆ ಆಧಾರದ ಮೇಲೆ 432 ವೈದ್ಯರು ನಮ್ಮ ಇಲಾಖೆಯಲ್ಲಿ ಏನು ಕೆಲಸ ಮಾಡುತ್ತಿದ್ದರು, ಆದೇಶ ಹೊರಡಿಸಿದ್ದೇವೆ. ಆ ಗುತ್ತಿಗೆ ವೈದ್ಯರು ರೆಗ್ಯುಲರ್ ಆಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ತಮಗೆಲ್ಲರಿಗೂ ಗೊತ್ತಿದ್ದ ಹಾಗೆ ಮಾನ್ಯ ಶಾಸಕರೆಲ್ಲರದು ಒಂದೇ ಅಭಿಪ್ರಾಯ ಏನೆಂದರೆ ಖಾಲಿ ಇರುವಂಥಹ ಹುದ್ದೆಗಳನ್ನು ತುಂಬಬೇಕು ಎಂದು ಇದೆ. ಅದರ ಬಗ್ಗೆ ಬಹಳ ವರ್ಷಗಳಿಂದ ನಿರಂತರ ಪ್ರಯತ್ನ ಮಾಡುತ್ತಿದ್ದು, ಆದರೆ ಸಾಧ್ಯವಾಗತ್ತಿಲ್ಲ. ಇನ್ನು ಮುಂದೆ ಎನ್‌ಕರೇಜ್ ಮಾಡಬೇಕು ಎನ್ನುವ ದೃಷ್ಟಿಯಿಂದ ಗುತ್ತಿಗೆ ವೈದ್ಯರು ಯಾರು ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಹಿಂದೆ 11,000 ರೂಪಾಯಿ ಸಂಬಳ ಕೊಡುತ್ತಿದ್ದು, ಇನ್ನು ಮುಂದೆ ಅವರಿಗೆ 16,217 ರೂಪಾಯಿ ಸಂಬಳವನ್ನು ಹೆಚ್ಚವರಿ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡು ಆದೇಶವನ್ನು ಹೊರಡಿಸಿದ್ದೇವೆ. ಅದೇ ರೀತಿ ಯಾರಾದರೂ ತಜ್ಞರು ನಮ್ಮ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವುದಕ್ಕೆ ಬಂದರೆ ಅವರಿಗೆ 17,554 ರೂಪಾಯಿಯನ್ನು ಕೊಡುವುದರ ಮೂಲಕ ಎನ್‌ಕರೇಜ್ ಕೊಡಬೇಕೆಂದು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ.

ವಸತಿ ನಿಲಯದಲ್ಲಿ ಸ್ಥಳಾವಕಾಶದ ಕೊರತೆ

51(396) ಶ್ರೀ ರಘುಪತಿಭಟ್ ಕೆ (ಉಡುಪಿ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?